## ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ.ನಂ.116/2022**

ಪಿರ್ಯಾದಿ : ಸರ್ಕಾರ, ಪೊನ್ನಂಪೇಟೆ ಪೋಲೀಸ್.

ವಿರುದ್ಧ

ಆರೋಪಿ : 1. ಸಚಿನ್ ಎಮ್.ಟಿ,
ತಂದೆಃ ತ್ಯಾಗರಾಜು,
ಪ್ರಾಯಃ 18 ವರ್ಷ,
ವಾಸಃ ಎಮ್.ಜಿ.ನಗರ, ಪೊನ್ನಂಪೇಟೆ,
ಕೊಡಗು.

2. ಶ್ರೀಮತಿ ದಿವ್ಯ,
ಗಂಡಃ ಅನಿಲ್‌ಕುಮಾರ್ ಎಮ್.ಪಿ,
ಪ್ರಾಯಃ 38 ವರ್ಷ,
ವಾಸಃ ಕಿರುಗೂರು ಗ್ರಾಮ,
ಪೊನ್ನಂಪೇಟೆ, ಕೊಡಗು.

### ಆ ಪಾ ಧ ನೆ ಯ ಸಾ ರಾ ಂ ಶ

ದಿನಾಂಕ 02.11.2021 ರಂದು ಸಮಯ ರಾತ್ರಿ 7.15 ಗಂಟೆಗೆ ಪೊನ್ನಂಪೇಟೆ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಪೊನ್ನಂಪೇಟೆ ಜಿ.ಎಂ.ಪಿ ಶಾಲೆಯ ಮುಂಭಾಗ ಧನ್ಯ ನಿಟ್ಟಿಂಗ್ ಅಂಡ ಟೈಲರಿಂಗ್ ಅಂಗಡಿಯ ಮುಂದಿನ ಗೋಣಿಕೊಪ್ಪ ಕುಟ್ಟ ರಾಜ್ಯ ಹೆದ್ದಾರಿ ರಸ್ತೆಯ ಬದಿಯ ಪಾದಚಾರಿ ರಸ್ತೆಯಲ್ಲಿ ಸಾಕ್ಷಿ 1 ಮೃತ ನಾಗರಾಜುರವರು ನಡೆದುಕೊಂಡು ಹೋಗುತ್ತಿರುವಾಗ 1 ನೇ ಆರೋಪಿಯಾದ ನೀವು 2 ನೇ ಆರೋಪಿಯವರ ಭಾಪ್ತು ಕೆಎ.12.ಆರ್.6875 ರ ಹೀರೋ ಪ್ಯಾಷನ್ ಪ್ರೋ ಬೈಕನ್ನು ಗೋಣಿಕೊಪ್ಪ ಕಡೆಯಿಂದ ಪೊನ್ನಂಪೇಟೆ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿದ್ದು, ಆ ಮೂಲಕ ನೀವು ಭಾ.ದಂ.ಸಂ.ಕಲಂ 279 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ 1 ನೇ ಆರೋಪಿಯಾದ ನೀವು 2 ನೇ ಆರೋಪಿಯವರ ಭಾಪ್ತು ಕೆಎ.12.ಆರ್.6875 ರ ಹೀರೋ ಪ್ಯಾಷನ್ ಪ್ರೋ ಬೈಕನ್ನು ಗೋಣಿಕೊಪ್ಪ ಕಡೆಯಿಂದ ಪೊನ್ನಂಪೇಟೆ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲಿಸಿಕೊಂಡು ಬಂದು ಪಾದಚಾರಿ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಮೃತ ಸಿ.ನಾಗರಾಜುರವರಿಗೆ ಡಿಕ್ಕಿ ಪಡಿಸಿದ ಪರಿಣಾಮ ಅವರ ಹಣೆ, ತಲೆಯ ಹಿಂಭಾಗ, ಕೈ ಮತ್ತು ಕಾಲುಗಳಿಗೆ ಗಾಯಗಳಾಗಿದ್ದು, ಬಲ ಕಾಲಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಅವರನ್ನು ಚಿಕಿತ್ಸೆ

Scanned with CamScanner

ಬಗ್ಗೆ ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದು, ಗಾಯಾಳುವನ್ನು ಹೆಚ್ಚಿನ ಚಿಕಿತ್ಸೆ ಬಗ್ಗೆ ಮಡಿಕೇರಿಯ ಮೆಡಿಕಲ್ ಕಾಲೇಜ್ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದು, ದಿ:03.11.2021 ರಂದು ಬೆಳಿಗ್ಗೆ 8.28 ಗಂಟೆಗೆ ಚಿಕಿತ್ಸೆ ಫಲಕಾರಿಯಾಗದೆ ಮೃತ ಪಟ್ಟಿದ್ದು ಆ ಮೂಲಕ ನೀವು ಭಾ.ದಂ.ಸಂ.ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ, ಆರೋಪಿಯಾದ ನೀವು ನಿಮ್ಮ ಬಳಿ ಬೈಕನ್ನು ಚಲಾಯಿಸಲು ಚಾಲನಾ ಪರವಾನಿಗೆ ಪತ್ರ ವಿಲ್ಲದಿದ್ದರೂ ಸಹ ಆ ದಿನ ಬೈಕನ್ನು ಚಾಲನೆ ಮಾಡಿದ್ದು ಆ ಮೂಲಕ 1 ನೇ ಆರೋಪಿಯಾದ ನಿಮ್ಮ ವಿರುದ್ಧ ಮೋಟಾರು ವಾಹನ ಕಾಯಿದೆ ಕಲಂ 3(1)ನ್ನು ಉಲ್ಲಂಘಿಸಿ ಜೊತೆಗೆ 181 ರಡಿಯಲ್ಲಿ ಅಪಾಧನೆ ಇದೆ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ 2 ನೇ ಆರೋಪಿಯಾದ ನೀವು 1 ನೇ ಆರೋಪಿಯ ಬಳಿ ಬೈಕನ್ನು ಚಲಾಯಿಸಲು ಪರವಾನಿಗೆ ಇಲ್ಲ ಎಂದು ತಿಳಿದಿದ್ದರೂ ಸಹ ಆ ದಿನ 1 ನೇ ಆರೋಪಿಗೆ ಬೈಕನ್ನು ಚಲಾಯಿಸಲು ನೀಡಿರುವ ಮೂಲಕ ಮೋಟಾರು ವಾಹನ ಕಾಯ್ದೆ 5 ಜೊತೆಗೆ 180 ರಡಿಯಲ್ಲಿ ಅಪರಾಧವನ್ನು ಎಸಗಿರುತ್ತೀರಿ.

ಐದನೆಯದಾಗಿ ಮೇಲೆ ಹೇಳಿದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ 2 ನೇ ಆರೋಪಿಯಾದ ನೀವು ಬೈಕಿಗೆ ಊರ್ಜಿತ ವಿಮೆ ಇಲ್ಲದೇ ಇದ್ದರೂ ಸಹ ಆ ದಿನ 1 ನೇ ಆರೋಪಿಗೆ ಬೈಕನ್ನು ಚಾಲನೆ ಮಾಡಲು ನೀಡಿರುವ ಮೂಲಕ ಮೋಟಾರು ವಾಹನ ಕಾಯ್ದೆ 146 ರ ಜೊತೆಗೆ 196 ರಡಿಯಲ್ಲಿ ಅಪಾಧನೆಯನ್ನು ಎಸಗಿರುತ್ತೀರಿ.

ಈ ಅಪಾಧನೆಯ ಸಾರಾಂಶವನ್ನು ಆರೋಪಿತನಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ, ಹೇಳಿ, ವಿವರಿಸಿ, ಹೇಳಲಾಗಿ ಅದನ್ನು ಆರೋಪಿತನು ಅರ್ಥಮಾಡಿಕೊಂಡು, ನಂತರ ನೀಡಲಾದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ಸರಿಯಾದ ಮತ್ತು ನಿಜವಾದ ಉತ್ತರವೆಂದು ದೃಢೀಕರಿಸುತ್ತೇನೆ.

9/6/202

ದಿನಾಂಕ:08.09.2022.
ಸ್ಥಳ: ಪೊನ್ನಂಪೇಟೆ.

Lakhin.M.T
Divya

9/6/2023

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ,ಪೊನ್ನಂಪೇಟೆ.

Scanned with CamScanner